## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ

## ಸಿಸಿ ನಂ. **224/2018**

ಚಾಸಾ- 4 ಪ್ರಾಸಾ-8

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ: 23-01-2026

| | | |
|---|---|---|
| ಹೆಸರು | : | ಸುಭಾಷ |
| ತಂದೆಯ ಹೆಸರು | : | ಮುಕುಂದ |
| ವಯಸ್ಸು | : | 55 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | : | ಇಂಗಳಗಿ |

-: **ಮುಖ್ಯ ವಿಚಾರಣೆ :- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :-**

ಚಾಸಾ 1 ಹೆಂಡತಿ. ಚಾಸಾ 5, 6, 7 ರವರು ಸಂಬಂಧಿಕರು ಇರುತ್ತಾರೆ.

ನಮ್ಮ ಮತ್ತು ಆರೋಪಿತರ ನಡುವೆ ಬಾಯಿ ಮಾತಿನ ಮಾತಿನ ಜಗಳವಾಗಿದ್ದು ಸಿಟ್ಟಿನ ಭರದಲ್ಲಿ ಚಾಸಾ 1 ರವರು ಒಂದು ದೂರನ್ನು ನೀಡಿರುತ್ತಾರೆ. ಆದರೆ ಅದರಲ್ಲಿ ಏನು ಬರೆದಿದೆ ಅಂತ ನನಗೆ ಗೊತ್ತಿಲ್ಲ. ನಾನು ಪೋಲಿಸರ ಮುಂದೆ ಹೇಳಿಕೆ ನೀಡಿಲ್ಲ ಮತ್ತು ನನಗೆ ಈ ಪ್ರಕರಣದ ಕುರಿತು ನನಗೆ ಯಾವುದೇ ಮಾಹಿತಿ ಇಲ್ಲ.

**(ಈ ಹಂತದಲ್ಲಿ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

<u>ಪಾಟೀ ಸವಾಲುಃ ಸ.ಸ.ಅ. ರವರಿಂದ</u>

ದಿಃ 11-03-2018 ರಂದು ಪಲ್ಸ ಪೋಲಿಯೋ ಕಾರ್ಯಕ್ರಮ ಪ್ರಯುಕ್ತ ಚಾಸಾ 1 ರವರು ನಮ್ಮ ಮನೆಯಲ್ಲಿದ್ದಾಗ ಆರೋಪಿತನು ಬಂದು ಚಾಸಾ 1 ರವರಿಗೆ ಬೈಯ್ಯುತ್ತಿದ್ದಾಗ ಯಾಕೆ ಬೈಯ್ಯುತ್ತಿದ್ದೀರಾ ಎಂದು ಕೇಳಿರುತ್ತೇನೆ ಎಂದರೆ ಸರಿ. ಆಗ ಆರೋಪಿ ನನಗೆ ಬಡಿಗೆಯಿಂದ ಎಡಗೈ ಮೇಲೆ ಹೊಡೆದಿರುತ್ತಾನೆ ಎಂದರೆ ಸರಿ. ಆಗ ಚಾಸಾ 1 ರವರು ಬಿಡಿಸಲು ಬಂದಾಗ ಅವರಿಗೂ ಹೊಡೆದಿರುತ್ತಾನೆ ಎಂದರೆ ಸರಿ.ಆಗ ಚಾಸಾ 5 ರಿಂದ 7 ರವರು ಜಗಳ ಬಿಡಿಸಿರುತ್ತಾರೆ ಎಂದರೆ ಸರಿಯಲ್ಲ. ದಿಃ 13-03-2018 ರಂದು ನಾನು ಈ ಕುರಿತು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ನ್ಯಾಯಾಲಯದ ಮುಂದೆ ಇರುವ ಆರೋಪಿಗೆ ನೋಡಿ ಸಾಕ್ಷಿ ಗುರುತಿಸುತ್ತಾರೆ.

ಸಾಕ್ಷಿಗೆ ನ್ಯಾಯಾಲಯದ ಮುಂದೆ ಒಂದು ಬಡಿಗೆ ತೋರಿಸಿದ್ದು ಸಾಕ್ಷಿ ಇದು ಅದು ಅಲ್ಲ ಎಂದು ನುಡಿಯುತ್ತಾರೆ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ **SGH** ವಕೀಲರಿಂದಃ-</u>

ಪೋಲಿಸರು ಏನು ಬರೆದುಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಆರೋಪಿ ನಾವು ರಾಜಿ ಆಗಿರುತ್ತೇವೆ ಎಂದರೆ ಸರಿ. ಊರಿನ ನಾಲ್ಕು ಜನರು ರಾಜಿ ಮಾಡಿರುತ್ತಾರೆ ಎಂದರೆ ಸರಿ.

<u>ಮರು ವಿಚಾರಣೆಃ - ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು

ಅಫಜಲಪೂರ